PCR No.316/2026

ಪಿ ಡಬ್ಲ್ಯೂ – 1

ದಿನಾಂಕಃ 15.05.2026 ರಂದು ಸಾಕ್ಷಿಗೆ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಸತ್ಯಾಪಣೆ ಹೇಳಿಕೆ : ಪಿರ್ಯಾದಿ ಪರ ವಕೀಲರಿಂದ:**

ನಾನು ನನ್ನ ಮುಖ್ಯ ವಿಚಾರಣೆಯಾಗಿ ಪ್ರಮಾಣ ಪತ್ರವನ್ನು ಹಾಜರುಪಡಿಸಿರುತ್ತೇನೆ. ಪ್ರಮಾಣ ಪತ್ರದಲ್ಲಿ ಬರೆದಿರುವುದನ್ನು ನಾನು ಹೇಳಿ ಬರೆಯಿಸಿದ್ದು, ಬರೆದ ನಂತರ ಅದನ್ನು ನನಗೆ ಓದಿ ಹೇಳಿದ್ದು ನಂತರ ಸಹಿ ಮಾಡಿರುತ್ತೇನೆ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವುದು ಎಲ್ಲಾ ಸತ್ಯವಾಗಿರುತ್ತದೆ.

ಸಾಕ್ಷಿಯು ಚೆಕ್‌ನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ–1 ಎಂದು, ಆರೋಪಿಯ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ 1(ಎ) ಎಂದು, ಬ್ಯಾಂಕಿನಿಂದ ನೀಡಲಾದ ಹಿಂಬರಹವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ–2 ಎಂದು, ವಕೀಲರ ನೋಟೀಸಿನ ಕಚೇರಿ ಪ್ರತಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ–3 ಎಂದು, ಅಂಚೆ ರಶೀದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ–4 ಎಂದು, ಆರೋಪಿಯ ವಿಳಾಸಕ್ಕೆ ಕಳುಹಿಸಿದ ನೋಟೀಸು ಪಡೆದುಕೊಳ್ಳದ ಕಾರಣ ಮರಳಿ ಬಂದಿದ್ದು, ಅದನ್ನು ತೆರೆದ ನ್ಯಾಯಾಲಯದಲ್ಲಿ ತೆರೆದು ನೋಡಲಾಗಿ ಅಂಚೆ ಕವರನ್ನು ನಿಪಿ 5 ಎಂದು, ಅದರೊಳಗಿನ ನೋಟೀಸಿನ ಪ್ರತಿಯನ್ನು ನಿಪಿ 5(ಎ) ಎಂದು ಗುರುತಿಸಲಾಯಿತು. ಆದುದರಿಂದ ಆರೋಪಿಯ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ.ಸ.ಇದೆ.

3 ನೇ ಹೆಚ್ಚುವರಿ ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ

ನ್ಯಾಯಾಲಯ, ದಾವಣಗೆರೆ